# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1182 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 27-08-2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ನಗರದ ನಿವಾಸಿಗಳಿಗೆ 24x7 ಕುಡಿಯುವ ನೀರಿನ ಕಾಮಗಾರಿ ಯೋಜನೆಯ ಗುಣಮಟ್ಟ ಹಾಗೂ ವಾಸ್ತವಾಂಶಗಳನ್ನು ಕುರಿತು ಪರಿಶೀಲಿಸಿ, ಅಧಿಕಾರಿಗಳಿಂದ ವರದಿ ಪಡೆಯಲಾಗಿದೆಯೇ; | ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಸಿಂಧನೂರು 24x7 ಕುಡಿಯುವ ನೀರಿನ ಕಾಮಗಾರಿ ಯೋಜನೆಯ ಗುಣಮಟ್ಟ ಹಾಗೂ ವಾಸ್ತವಾಂಶಗಳನ್ನು ಪರಿಶೀಲಿಸಿ, ಕೆಯುಐಡಿಎಫ್‌ಸಿ ವತಿಯಿಂದ ಮಧ್ಯಂತರ ವರದಿಯನ್ನು ಪಡೆಯಲಾಗಿದೆ.<br><br>ಮುಂದುವರಿದಂತೆ, ಸದರಿ ಕಾಮಗಾರಿಯ ಸ್ಥಳ ಪರಿಶೀಲಿಸಿ ವಾಸ್ತವಾಂಶದ ವರದಿಯನ್ನು ನೀಡಲು Dr.M.S.Mohan Kumar, Prof (Retd.), Hon Consultant ICWar Indian Institute of Science, Bengaluru, Adjunct Prof, IIT Madras ರವರನ್ನು ನೇಮಕ ಮಾಡಲಾಗಿದ್ದು, ಈಗಾಗಲೇ, ಸ್ಥಳ ಪರಿಶೀಲನೆ ನಡೆಸಿರುತ್ತಾರೆ. ಸದರಿಯವರಿಂದ ವರದಿಯನ್ನು ನಿರೀಕ್ಷಿಸಲಾಗಿದೆ. |
| ಆ) | ಪಡೆದಿದ್ದಲ್ಲಿ, ಸಿಂಧನೂರು ನಗರದ ನಿವಾಸಿಗಳಿಗೆ 24x7 ಕುಡಿಯುವ ನೀರಿನ ಸಮರ್ಪಕವಾಗಿ ಮಾಡಲಾಗುತ್ತಿರುವ ಕುರಿತು ವರದಿಯಲ್ಲಿ ಉಲ್ಲೇಖವಿದೆಯೇ; | ಮದ್ಯಂತರ ವರದಿಯನುಸಾರ ಪ್ರಸ್ತುತ ಆರ್ಬಿಟ್ರೇಷನ್ ಪ್ರಗತಿಯಲ್ಲಿರುವುದರಿಂದ, ಸಿಂಧನೂರು ನಗರದ 24x7 ಕುಡಿಯುವ ನೀರಿನ ಕಾಮಗಾರಿ ಅಪೂರ್ಣಗೊಂಡಿದ್ದು, 24x7 ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿರುವುದಿಲ್ಲವೆಂದು ಉಲ್ಲೇಖಿಸಲಾಗಿದೆ. |
| ಇ) | 24x7 ಕುಡಿಯುವ ನೀರಿನ ಕಾಮಗಾರಿ ಯೋಜನೆಯ ನ್ಯೂನ್ಯತೆಗಳನ್ನು ಸರಿಪಡಿಸಿ, ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಯಾವ ಕಾಲಮಿತಿಯೊಳಗೆ ನಗರದ ನಿವಾಸಿಗಳಿಗೆ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುವುದು? | ಕೆಯುಐಡಿಎಫ್‌ಸಿ ಯ 51ನೇ ಅಧಿಕಾರಯುತ ಸಮಿತಿ ಸಭೆಯ ನಿರ್ಣಯ ಹಾಗೂ ಆರ್ಬಿಟ್ರೇಟರ್ ರವರು ಬಾಕಿ ಕಾಮಗಾರಿಗಳನ್ನು ಬೇರೆ ಗುತ್ತಿಗೆದಾರರಿಂದ ತೆಗೆದುಕೊಳ್ಳಲು ದಿನಾಂಕ:26/05/2025 ರಂದು ಆದೇಶದ ರೀತ್ಯ, ನಗರ ಸಭೆಯವರು ಬಾಕಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕಾಗಿದೆ.<br><br>ಈಗಾಗಲೇ ಸರ್ಕಾರದಿಂದ ನೇಮಕ ಮಾಡಿರುವ Prof.M.S.Mohan Kumar, Prof (Retd.), Hon Consultant ICWar Indian Institute of Science, Bengaluru, Adjunct Prof, IIT Madras ರವರಿಂದ ವರದಿಯು ಸ್ವೀಕೃತವಾದ ನಂತರ ಈ ಸಂಬಂಧ ತಾಂತ್ರಿಕ ಸಲಹೆ ಮೇರೆಗೆ ಬಾಕಿ ಕಾಮಗಾರಿಗಳ ಅಂದಾಜನ್ನು ತಯಾರಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |

ಕಡತ ಸಂಖ್ಯೆ:ನಅಇ 185 ಪಿಆರ್‌ಜೆ 2026

(ಡಾ. ಯತೀಂದ್ರ ಸಿದ್ದರಾಮಯ್ಯ)
ನಗರಾಭಿವೃದ್ಧಿ ಸಚಿವರು